ಹಾಕಲಿಕ್ಕೆ ಹಿಂಜರಿಯುತ್ತಿದ್ದೆವು. ರಜೆ ಹಾಕುವುದು ಅಪರಾಧ ಅನ್ನಿಸುತ್ತಿತ್ತು. ಕಾಲೇಜಿನಲ್ಲಿ ಕನ್ನಡ ಸಂಘ ಆರಂಭಿಸಿದೆ. ಆ ಸಂಘ ನಮ್ಮ ಕನ್ನಡ ಹುಡುಗರಿಗೆಲ್ಲ ಆತ್ಮವಿಶ್ವಾಸ ತಂದುಕೊಟ್ಟಿತು. ಕ್ಲಾಸ್ ರೂಂಗಿಂತಲೂ ಕನ್ನಡ ಸಂಘ ವಿದ್ಯಾರ್ಥಿಗಳನ್ನು ನನಗೆ ಹೆಚ್ಚು ನಿಕಟವಾಗಿಸಿತು. ಕ್ರೈಸ್ಟ್ ಕಾಲೇಜ್‌ನಲ್ಲಿ ಚಿ. ಶ್ರೀನಿವಾಸರಾಜು ಅವರು, ಸೇಂಟ್ ಜೋಸೆಫ್ಸ್‌ನಲ್ಲಿ ನಾನು ಕನ್ನಡಸಂಘ ಆರಂಭಿಸಿದೆವು. ಇಂಗ್ಲಿಷ್ ಪರಿಸರದಲ್ಲಿ ಕನ್ನಡಸಂಘ ನಮಗೆ ಅನಿವಾರ್ಯವಾಗಿತ್ತು.

ಮೋಹನ್‌ದಾಸ್ ಪೈ ಸೇಂಟ್ ಜೋಸೆಫ್ಸ್‌ನಲ್ಲಿ ನನ್ನ ವಿದ್ಯಾರ್ಥಿ. ಅವರು ಹಿಂದಿ ವಿದ್ಯಾರ್ಥಿಯಾದರೂ ನನ್ನ ಕನ್ನಡ ತರಗತಿಗಳಿಗೆ ಬರುತ್ತಿದ್ದರು. ಸಿನಿಮಾನಟ ಪ್ರಕಾಶ್‌ರಾಜ್, ಕ್ರಿಕೆಟಿಗರಾದ ರಾಹುಲ್ ದ್ರಾವಿಡ್, ರೋಜರ್ ಬಿನ್ನಿ, ಅರುಣ್‌ಕುಮಾರ್ ಇವರೆಲ್ಲ ನನ್ನ ವಿದ್ಯಾರ್ಥಿಗಳು. ಚೆಸ್ ಚಾಂಪಿಯನ್ ರವಿ, ಹಾಕಿ ಆಟಗಾರ ಆಶೀಷ್ ಬಲ್ಲಾಳ್ ನನ್ನ ವಿದ್ಯಾರ್ಥಿಗಳು.

**◆ ಎಂ.ಎ.ನಲ್ಲಿ ರ‍್ಯಾಂಕ್ ಪಡೆದ ನಿಮಗೆ ವಿಶ್ವವಿದ್ಯಾಲಯದಲ್ಲಿ ಅವಕಾಶ ಸಿಗಲಿಲ್ಲವಾ?**

ಅದೆಲ್ಲ ನಮಗೆ ಗೊತ್ತೇ ಇರಲಿಲ್ಲ. ಮುನ್ನೂರು ರೂಪಾಯಿ ಸಂಬಳ ಬರುತ್ತಿದ್ದವನಿಗೆ ಆರುನೂರು ರೂಪಾಯಿ ಸಿಕ್ಕಾಗ ಆಕಾಶವೇ ಸಿಕ್ಕಂತೆ ಅನ್ನಿಸಿತ್ತು. ಒಂದು ಕೋಣೆ ಇರುವ ಮನೆಗೆ ಹೋದಾಗ, 'ಇಷ್ಟು ದೊಡ್ಡ ಮನೆಯಲ್ಲಿ ಹೇಗಪ್ಪಾ ಇರೋದು' ಎಂದು ಸಿಕ್ಕಾಪಟ್ಟೆ ಮುಜುಗರವಾಗಿತ್ತು. ಒಂದು ಸಲ ಜಿ.ಎಸ್.ಎಸ್. ಅವರೊಂದಿಗೆ ಕೇರಳಕ್ಕೆ ಹೋಗಿದ್ದೆ. ಫೈವ್ ಸ್ಟಾರ್ ಹೋಟೆಲ್ಲಿನಲ್ಲಿ ಸರ್ಕಾರ ಇಳಿಸಿತ್ತು. ಬೆಳಗ್ಗೆ ಜಿ.ಎಸ್.ಎಸ್. ತಿಂಡಿಯ ಬೆಲೆ ವಿಚಾರಿಸಿದರು. ದೋಸೆಗೆ ನೂರೈವತ್ತು, ಇಡ್ಲಿಗೆ ಐವತ್ತು ಎಂದಾಗ, 'ನನಗೆ ಇಡ್ಲಿಯೇ ಇರಲಿ' ಎಂದರು. 'ಸರ್ಕಾರ ಹಣ ಕೊಡುತ್ತಿದೆ' ಎಂದರೂ, 'ನೂರೈವತ್ತು ರೂಪಾಯಿ ಕೊಟ್ಟು ದೋಸೆ ತಿನ್ನೋದಾ? ನೀವು ಹುಡುಗರು ದೋಸೇನ ತಗೊಳ್ಳಿ. ನನಗೆ ಇಡ್ಲಿಯೇ ಸಾಕು' ಎಂದಿದ್ದರು. ಬಡತನದಿಂದ ಬಂದ ನಮಗೆ ಸ್ವಲ್ಪ ಶ್ರೀಮಂತಿಕೆ ಕೂಡ ಭಯ ಹುಟ್ಟಿಸುತ್ತಿತ್ತು. ಬದುಕಿನಲ್ಲಿ ನಾನು ಅಲ್ಪತೃಪ್ತ, ಕಾವ್ಯದಲ್ಲಿ ಮಾತ್ರ ಮಹತ್ವಾಕಾಂಕ್ಷೆ.

**◆ ಕವಿಯಾಗಿ ನಿಮಗೆ ಆತ್ಮವಿಶ್ವಾಸ ಬಂದ ಕ್ಷಣ ಯಾವುದು?**

ಬೆಂಗಳೂರಿಗೆ ಬಂದ ಮೇಲೆ ಕನ್ನಡದ ದೊಡ್ಡ ದೊಡ್ಡ ಕವಿಗಳು ನನಗೆ ಹತ್ತಿರವಾದರು. ಕಾವ್ಯದ ಸ್ವರೂಪ ಎಷ್ಟು ಗಂಭೀರವಾದುದು ಎನ್ನುವುದು, ಕಾವ್ಯ ಹೃದಯ ಕತ್ತಿಡುವ ಕೆಲಸ ಎನ್ನುವುದು ಅರ್ಥವಾಯಿತು. ನನ್ನ ಸಹೋದ್ಯೋಗಿಯಾಗಿದ್ದ ಜಿ.ಕೆ. ಗೋವಿಂದರಾವ್ ಅವರು ಅನೇಕ ಇಂಗ್ಲಿಷ್ ಪುಸ್ತಕಗಳನ್ನು ಓದಿಸಿದರು. ತ್ಯಾಗರಾಜನಗರದ ನನ್ನ ಮನೆಗೆ ಸಮೀಪದಲ್ಲೇ ಕಿ.ರಂ. ಮನೆ ಇತ್ತು. ಎಸ್. ದಿವಾಕರ್ ಅವರ ಮನೆಯೂ ಸಮೀಪವಿತ್ತು. ಇವರೆಲ್ಲ ಪುಸ್ತಕಗಳ ಹುಚ್ಚರೇ. ನನಗೆ ಪುಸ್ತಕಗಳನ್ನು ಕೊಟ್ಟು ಓದಿಸಿದರು. ಶ್ರೀಮರಾಮಭಟ್ಟರ ಪರಿಚಯವಾಗಿ, ಅವರ ಮೂಲಕ ಸಂಸ್ಕೃತ ಕಲಿತೆ. ಅವರು 'ರಘುವಂಶ' ಪಾಠ ಹೇಳಿದರು.

ಅಡಿಗರು ನನ್ನ 'ಸಿಂದಾಬಾದನ ಆತ್ಮಕಥೆ' ಕವಿತೆಯನ್ನು 'ಸಾಕ್ಷಿ'ಯಲ್ಲಿ ಪ್ರಕಟಿಸಿದರು. ಆಗ 'ಸಾಕ್ಷಿ'ಯಲ್ಲಿ ಅಥವಾ 'ಪ್ರಜಾವಾಣಿ'ಯಲ್ಲಿ ಪದ್ಯ ಬಂದರೆ ಕವಿ ಪಟ್ಟ ದೊರೆತಂತೆ ಎನ್ನುವ ಮಾತಿತ್ತು. 'ಸಿಂದಾಬಾದನ ಆತ್ಮಕಥೆ ನನಗೆ ತುಂಬಾ ಇಷ್ಟವಾಯಿತು. ಅದನ್ನು ಸಾಕ್ಷಿಯಲ್ಲಿ ಪ್ರಕಟಿಸುತ್ತೇನೆ' ಎಂದು ಅಡಿಗರು ಪತ್ರ ಬರೆದರು, ಅದು ಕವಿಯಾಗಿ ನನಗೆ ಆತ್ಮವಿಶ್ವಾಸ ತಂದುಕೊಟ್ಟ ಕ್ಷಣ. 1977ರಲ್ಲಿ ಮೂರು ನೀಳ್ಗವಿತೆಗಳನ್ನೊಳಗೊಂಡ 'ಸಿಂದಾಬಾದನ ಆತ್ಮಕಥೆ' ಸಂಕಲನ ಹೊರತಂದೆ. ಆ ಸಂಕಲನವನ್ನು ಪು.ತಿ.ನ. ಅವರಿಗೆ ಕಳಿಸಿಕೊಟ್ಟೆ. 'ನಿಮ್ಮ ಪದ್ಯಗಳನ್ನು ಓದಿದಾಗ ನನಗೆ ಹಿಂದೆ ಅಡಿಗರ ಪದ್ಯಗಳನ್ನು ಓದಿದಾಗ ಆಗಿದ್ದ ಸಂತೋಷ ಮತ್ತೆ ಆಯಿತು' ಎಂದವರು ಬರೆದರು.